ಪಂಚಲಿಂಗ ದರ್ಶನಕ್ಕೆ ಮಾಡಲಾಗಿರುವ ಸೌಲಭ್ಯ

ಶ್ರೀ ಹೆಚ್. ಸಿ. ಮಹದೇವಪ್ಪ (ಟಿ. ನರಸೀಪುರ).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಿನಾಂಕ ೧–೧೨–೧೯೮೬ ರಂದು ತಲಕಾಡಿನಲ್ಲಿ ಜರುಗಲಿರುವ 'ಪಂಚಲಿಂಗ ದರ್ಶನದ ವಿಷಯ ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಅಲ್ಲಿ ನಡೆಯುವ ಜಾತ್ರೆಗೆ ಸಚ್ಚಾಜಿಗಳು ಯಾವ ಕಾರ್ಯಕ್ರಮಗಳನ್ನು ಸರ್ಕಾರದವರು ಕೈಗೊಳ್ಳಲಿದ್ದಾರೆ ?

ಇ) ಯಾತ್ರಿಗಳಿಗೆ ಅನುಕೂಲವಾಗುವ ದಿಸೆಯಲ್ಲಿ ಸರಕಾರದವರು ಯಾವುದಾದರೂ ಶಾಶ್ವತ ಕಾರ್ಯಕ್ರಮಗಳನ್ನು ಕೈಗೊಳ್ಳುವರೇ ?

ಈ) ಕಾರ್ಯಕ್ರಮಗಳನ್ನು ಯಾವಾಗ ಕೈಗೊಳ್ಳಲಾಗುವುದು

ಶ್ರೀ ಎಸ್. ಆರ್. ಬೊಮ್ಮಾಯಿ.—(ಮಾನ್ಯ ಕಂದಾಯ ಮಂತ್ರಿಗಳು)

ಅ) ಬಂದಿದೆ.

ಆ) ಈ ವಿಚಾರದಲ್ಲಿ ವಿಶೇಷ ಜಿಲ್ಲಾಧಿಕಾರಿಗಳು, ಮೈಸೂರು ರವರ ಅಧ್ಯಕ್ಷತೆಯಲ್ಲಿ ಸ್ಥಳೀಯ ಅಧಿಕಾರಿಗಳ ಮತ್ತು ಶಾಸಕರ ಒಂದು ಸಭೆ ದಿನಾಂಕ ೮–೨–೮೬ ನಡೆದು ಸಭೆಯ ಕೆಳಗಿನ ಕಾರ್ಯಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕೆಂದು ಪ್ರಸ್ತಾವನೆ ಕಳುಹಿಸಿದ್ದಾರೆ,

೧. ರಸ್ತೆಗಳ ದುರಸ್ತಿ
೨. ದೇವಸ್ಥಾನಗಳ ದುರಸ್ತಿ
೩. ಜನಾರೋಗ್ಯ ವ್ಯವಸ್ಥೆ
೪. ಕುಡಿಯುವ ನೀರಿನ ಸರಬರಾಜು.
೫. ಜಾತ್ರೆಯ ಇತರೇ ಕಾರ್ಯಕ್ರಮಗಳು
೬. ವಿದ್ಯುಚ್ಛಕ್ತಿ ಏರ್ಪಾಡು.

ಇ) ಪರಿಶೀಲಿಸಲಾಗುತ್ತಿದೆ,

ಈ) ಅದಷ್ಟು ಜಾಗ್ರತೆಯಾಗಿ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ನಿವೃತ್ತಿ ಹೊಂದಿದ ಗ್ರಾಮ ಸಹಾಯಕರ ವಿಶ್ರಾಂತಿವೇತನದ ಬಗ್ಗೆ

ಶ್ರೀ ಬಿ. ಎ. ಉಪ್ಪಿನ (ಕುಂದಗೋಳ).—ಮಾನ್ಯ ಕಂದಾಯ ಮಂತ್ರಿಗಳವರು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ವರ್ಷದಿಂದ ರಾಜ್ಯದಲ್ಲಿಯ ನಿವೃತ್ತಿ ಹೊಂದಿದ ಗ್ರಾಮ ಸಹಾಯಕರಿಗೆ (ಓಲೆಕಾರರಿಗೆ) ವಿಶ್ರಾಂತಿ ವೇತನ (ಪೆನ್‌ಷನ್) ದೊರಕಿಲ್ಲವೆಂಬುದು ಸರಕಾರದವರ ಗಮನಕ್ಕೆ ಬಂದಿದೆಯೋ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರಕಾರದವರು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿಮಾನ್ಯ (ಕಂದಾಯ ಮಂತ್ರಿಗಳು.—)

ಅ) ಓಲೆಕಾರರೂ ಒಳಗೊಂಡಂತೆ ಸಲವು ವರ್ಗದ ಕೆಳದರ್ಜೆ ಗ್ರಾಮ ನೌಕರರನ್ನು ಸರ್ಕಾರದ ಸೇವೆಯಲ್ಲಿ ವಿಲೀನಗೊಳಿಸಿ ನೇಮಿಸಿಕೊಂಡಿಲ್ಲವಾದ್ದರಿಂದ ಇವರು ವಿಶ್ರಾಂತಿ ವೇತನ ಪಡೆಯಲು ಅರ್ಹರಾಗುವುದಿಲ್ಲ.

ಕರ್ನಾಟಕ ಗ್ರಾಮಾಧಿಕಾರಿಗಳ ರದ್ದುಪಡಿತ ಕಾಯಿದೆ ೧೯೬೧ ರ ಅನ್ವಯ್ದ ಅನುವಂಶೀಯ ಹುದ್ದೆಗಳು ರದ್ದಾದ ಕೆಳದರ್ಜೆ ಗ್ರಾಮ ನೌಕರರಿಗೆ ಹಲವು ಪರಿತ್ಯಾಗಗಳಿಗೊಳಪಟ್ಟು ದಿನಾಂಕ ೧–೪–೧೯೮೬ ರಿಂದ ಜಾರಿಗೆ ಬರುವಂತೆ ತಿಂಗಳೊಂದಕ್ಕೆ ೭೫–೦೦ ರೂಪಾಯಿಗಳ ಅನುಕಂಪ ಭತ್ಯೆಯನ್ನು ಮಂಜೂರು ಮಾಡಲಾಗಿದೆ,

ಆ) ಮೇಲೆ ಕೊಟ್ಟ (ಅ) ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ;